ಬೋರ್‌ವೆಲ್ ಕೊರೆಯಲಿಕ್ಕೆ RDPR ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

7. ಗಮನ ಸೆಳೆಯುವ ಸೂಚನೆಗಳು

1. **ವಿಷಯ :– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುದಾನದ ಕೊರತೆಯಿಂದ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಷ್ಟವಾಗಿರುವ ಬಗ್ಗೆ.**

ಶ್ರೀ ಯು. ಟಿ. ಖಾದರ್ (ಮಂಗಳೂರು) :– ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುದಾನದ ಕೊರತೆಯಿಂದ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಷ್ಟವಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುದಾನದ ಕೊರತೆಯಿಂದ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಷ್ಟವಾಗಿರುವ ಬಗ್ಗೆ ಮಾನ್ಯ ಸದಸ್ಯರು ಗಮನವನ್ನು ಸೆಳೆದಿದ್ದಾರೆ.

2011–12ರ ಸಾಲಿನಲ್ಲಿ ರೂ. 1500.00 ಕೋಟಿ ಅಂದಾಜು ಮೊತ್ತದ ಕುಡಿಯುವ ನೀರಿನ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ. ಈವರೆಗೆ ರಾಜ್ಯ ಮತ್ತು ಕೇಂದ್ರ ವಲಯಗಳಡಿ (ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನದ ಸಲುವಾಗಿಯೇ (Over and above budgetary provision) ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ರೂ. 124.74 ಕೋಟಿ ಸೇರಿ) ಒಟ್ಟಾರೆ ರೂ. 1418.72 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ರೂ. 34.57 ಕೋಟಿ ಮಂಗಳೂರು ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾಗಿದೆ. ವೆಚ್ಚ ರೂ. 25.57 ಕೋಟಿಯಾಗಿದೆ. ಇದರಲ್ಲಿ ರೂ. 1.65 ಕೋಟಿ ಮಂಗಳೂರು ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾಗಿದೆ. ಟಾಸ್ಕ್ ಫೋರ್ಸ್ ಸಮಿತಿಗಳಿಗೆ ಪೂರಕವಾಗಿ ತಾಲ್ಲೂಕು ಮಟ್ಟದ ಕಂಟ್ರೋಲ್ ರೂಂಗಳು ಚುರುಕಾಗಿ ಕೆಲಸ ನಿರ್ವಹಿಸುತ್ತಿದ್ದು, ಕುಡಿಯುವ ನೀರಿನ ಸಮಸ್ಯೆಗೆ ಆದ್ಯತೆ ಮೇಲೆ ಸ್ಪಂದಿಸಲಾಗುತ್ತಿದೆ. ಇದಲ್ಲದೆ, ವಾಸ್ತವಿಕವಾಗಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಜಿಲ್ಲಾಧಿಕಾರಿಗಳ (**ಕಂದಾಯ ಇಲಾಖೆಯು ಸಹ ದಕ್ಷಿಣ ಜಿಲ್ಲೆಗೆ**

ರೂ. 200.00 ಲಕ್ಷಗಳನ್ನು CRF (SDRF) ನಡಿ ತುರ್ತು ಪರಿಹಾರ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದೆ) ಸಮನ್ವಯದಲ್ಲಿ ತುರ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆದುಕೊಳ್ಳಲು ಸಹ ಅನುಮತಿ ನೀಡಲಾಗಿದೆ. ಜೊತೆಗೆ, ಪಾರದರ್ಶಕ ನೀತಿಯಡಿ ರೂ. 5.00 ಲಕ್ಷ ವರೆಗಿನ ಕಾಮಗಾರಿಗಳನ್ನು ನೇರವಾಗಿ ಇಲಾಖೆ ಮುಖೇನವೇ ಅನುಷ್ಠಾನಗೊಳಿಸಲು ಸಹ ವಿನಾಯಿತಿ ನೀಡಲಾಗಿದೆ. ಇನ್ನು ಹೆಚ್ಚಿನ ಅನುದಾನದ ಅಗತ್ಯತೆಯಿದ್ದಲ್ಲಿ ಸರ್ಕಾರ ಪರಿಶೀಲಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ನೋಡಿಕೊಳ್ಳಲು ಬದ್ಧವಾಗಿದೆ. ಈ ಕುರಿತು, ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೂ ಸೂಕ್ತ ನಿರ್ದೇಶನಗಳನ್ನು ಸಹ ನೀಡಲಾಗಿದೆ.

1. ರೂ. 1680.00 ಲಕ್ಷ ಅಂದಾಜಿನ ಮಂಗಳೂರು ತಾಲ್ಲೂಕಿನ ಕಿನ್ನಿಗೋಳಿ ಮತ್ತು ಇತರೆ 17 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯು ಪ್ರಗತಿಯಲ್ಲಿರುತ್ತದೆ.
2. ರೂ. 1312.70 ಲಕ್ಷದ ಮಂಗಳೂರು ತಾಲ್ಲೂಕಿನ ಮಳವೂರು ಮತ್ತು ಇತರೆ 10 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಪ್ರಗತಿಯಲ್ಲಿದೆ. ಈ ಯೋಜನೆಯ ರೂ. 750.00 ಲಕ್ಷ ಮೊತ್ತದ ಪರಿಷ್ಕೃತ ಅಂದಾಜಿನ ವೆಂಟೆಡ್ ಡ್ಯಾಂ ಕಾಮಗಾರಿಗೂ ಸಹ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು, ಇವರ ಮಧ್ಯಂತರ ವರದಿ ಆಧರಿಸಿ ಅನುಮೋದನೆ ನೀಡಿದೆ.
3. ಇದಲ್ಲದೆ, ದಿನಾಂಕ : 01.10.2011 ರಂದು ಜರುಗಿದ ರಾಜ್ಯ ಮಟ್ಟದ SLSSC ಸಭೆಯಲ್ಲಿ ಬಂಟ್ವಾಳ ತಾಲ್ಲೂಕಿನ ಈ ಕೆಳಕಂಡ ಆರು ಯೋಜನೆಗಳಿಗೆ DSR ತಯಾರಿಸಲು ಅನುಮೋದನೆ ನೀಡಲಾಗಿದೆ.

ಕ್ರ.ಸಂ.	ಯೋಜನೆ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಸಜಿಪಮುನ್ನೂರು ಮತ್ತು ಇತರೆ 54 ಜನವಸತಿಗಳು	15,00.00
2	ಕರೋಪಾಡಿ ಮತ್ತು ಇತರೆ 79 ಜನವಸತಿಗಳು	2735.00
3	ನರಿಕೊಂಬು ಮತ್ತು ಇತರೆ 38 ಜನವಸತಿಗಳು	1900.00
4	ಮಾಣಿ ಮತ್ತು ಇತರೆ 67 ಜನವಸತಿಗಳು	2300.00
5	ಸಂಗಬೆಟ್ಟು ಮತ್ತು ಇತರೆ 65 ಜನವಸತಿಗಳು	2000.00
6	ಸರ್ಪಾಡಿ ಮತ್ತು ಇತರೆ 97 ಜನವಸತಿಗಳು	2000.00

ಈ ಮೇಲಿನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಮಂಗಳೂರು ಜಿಲ್ಲೆಯಲ್ಲಿನ ಸಮಸ್ಯಾತ್ಮಕ ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆಯಾಗಲಿದೆ.

ಶ್ರೀ ಎಸ್. ಸುರೇಶ್ ಕುಮಾರ್ :– ನಾನು ಹೇಳಿಕೆಯನ್ನು ಪೂರ್ತಿ ಓದಬೇಕೋ ಅಥವಾ ಅವರು clarification ಕೇಳುತ್ತಾರೋ?

ಅಧ್ಯಕ್ಷರು :– Clarfication ಏನಾದರೂ ಇದ್ದರೆ ಕೇಳಿ.

ಶ್ರೀ ಯು. ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಈ ಉತ್ತರವನ್ನು ನೋಡುವಾಗ 4–5 ವರ್ಷ ಕಳೆದ ನಂತರ ಸಮಸ್ಯೆ ಏನಾದರೂ ಕೆಲವೊಂದು ಕಡೆ ಬಗೆಹರಿಯಬಹುದು. ಈಗ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಹೇಗೆ ಬಗೆಹರಿಸಬೇಕು ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು :– ಈಗ 30 ಲಕ್ಷ ಕೊಟ್ಟರಲ್ಲ?

ಶ್ರೀ ಯು. ಟಿ. ಖಾದರ್ :– 30 ಲಕ್ಷ ಕೊಟ್ಟರು, ಸ್ವಲ್ಪ ಸಮಸ್ಯೆ ಇದೆ. 30 ಲಕ್ಷ ಕೊಟ್ಟಿದ್ದಕ್ಕೆ ನಾನು ಸ್ವಾಗತಿಸುತ್ತೇನೆ. ಎರಡನೆಯದಾಗಿ ನಾವೊಂದು ಬೋರ್‌ವೆಲ್ ಕೊರೆದರೆ MESCOM ನವರ ದೊಡ್ಡ ಸಮಸ್ಯೆ ನಮ್ಮಲ್ಲಿದೆ. ಅಲ್ಲಿ ಬಹುಶಃ ನೀವು transformerಗೆ ದುಡ್ಡು ಕಟ್ಟಿ ಎಂದು ಹೇಳುತ್ತಾರೆ. Scarcity ಯಲ್ಲಿ ಕಾನೂನು ಇದೆ. Scarcity ಸಮಯದಲ್ಲಿ ಬೋರ್‌ವೆಲ್ ಕೊರೆದರೆ ಅದಕ್ಕೆ transformerಗೆ ದುಡ್ಡು ಕಟ್ಟಲಿಕ್ಕಿಲ್ಲ. ಅದನ್ನು ಅಲ್ಲಿ ಪಾಲಿಸುವುದಿಲ್ಲ. ನಾವು ಕಳೆದ ವರ್ಷ ಹೊಡೆದಂತಹ ಬೋರ್‌ವೆಲ್‌ಗೆ ಇನ್ನೂ ಕನೆಕ್ಷನ್ ಆಗಿಲ್ಲ. ಬೇರೆ ಬೇರೆ ರೀತಿಯಲ್ಲಿ ಸಮಸ್ಯೆ ಉಂಟು ಮಾಡುವಂತಹ ಅವಕಾಶ ಆಗುತ್ತದೆ. ಆದಕಾರಣ ನಮಗೆ ಸ್ವಲ್ಪ ಅನುದಾನ ಜಾಸ್ತಿ ಕೊಡಬೇಕು.

ಶ್ರೀ ನಾಡಗೌಡ ವೆಂಕಟರಾವ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಸ್ಪಷ್ಟವಾದ ಉತ್ತರ ಹೇಳಬೇಕಾಗುತ್ತದೆ. ಅದೇನೆಂದರೆ, ಸ್ಕೇರ್‌ಸಿಟಿ ಕೆಲಸಗಳಿಗೆ ಬೇಕಾಗಿರುವ ಕರೆಂಟ್‌ಗೋಸ್ಕರ ಇಲಾಖೆಯವರೆ ದುಡ್ಡು ಕಟ್ಟಿ ಎಂದು ಹೇಳುತ್ತಿದ್ದಾರೆ. ನಾವು 1 ಅಥವಾ 2 ಲಕ್ಷ ರೂಪಾಯಿ ಕೊಡುತ್ತೇವೆ. ಆದರೆ, ಡೆಪಾಸಿಟ್‌ಗಾಗಿಯೇ ಒಂದು ಲಕ್ಷ ರೂಪಾಯಿ ಆಗುತ್ತದೆ. ಆದ್ದರಿಂದ, ಮೊದಲು ಡಿ.ಸಿ. ರವರ ಮೂಲಕ ಏನು ವ್ಯವಸ್ಥೆ ಇತ್ತೋ ಅದನ್ನೇ ಮುಂದುವರಿಸುವುದಕ್ಕೆ ಆದೇಶ ಮಾಡಬೇಕು. ನಾವು ಕೇವಲ technically sanction ಮಾಡಿಕೊಡುತ್ತೇವೆ ಇದಕ್ಕೆ ಬೇಕಾಗಿರುವ ಹಣವನ್ನು ನೀವೇ ಕಟ್ಟಿಕೊಳ್ಳಬೇಕೆಂಬ ಆದೇಶವಾಗಿದ ಎಂದು ಇಂಧನ ಇಲಾಖೆಯ ಸಚಿವರು ಈಗಾಗಲೇ ಹೇಳಿದ್ದಾರೆ. ಆದ್ದರಿಂದ, ಇದನ್ನು ದಯವಿಟ್ಟು ಈಗ ಮಾರ್ಪಾಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು.ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ಬೋರ್‌ವೆಲ್ ಕೊರೆಸಿ ಒಂದು ವಾರದೊಳಗೆ ಕೆ.ಇ.ಬಿ. ರವರು ವಿದ್ಯುತ್ ಕನೆಕ್ಷನ್ ಕೊಡುವುದರ ಬಗ್ಗೆ ಸರ್ಕಾರದಿಂದ ಆದೇಶವಾಗಬೇಕು. ಎರಡನೇ ವಿಚಾರ ಏನೆಂದರೆ, ತಾವು ಸ್ಕೇರ್‌ಸಿಟಿ ಕೆಲಸಗಳಿಗೆ ದುಡ್ಡನ್ನು ಕೊಡುತ್ತೀರಿ ಆದರೆ, ಅದರಲ್ಲಿ ಹಲವಾರು ಕಾನೂನು ತೊಡಕುಗಳಿಗವೆ. ಅದರಲ್ಲಿ ಕೇವಲ ಬೋರ್‌ವೆಲ್ ಕೊರೆಯಬಹುದೇ ಹೊರತು ಪೈಪ್ ಲೈನ್ ಹಾಕುವುದಕ್ಕೆ ಅದರಲ್ಲಿ ಸಾಧ್ಯವಾಗುವುದಿಲ್ಲ. ಮತ್ತೆ ಅದನ್ನು extension ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಈ ರೀತಿಯಾದ ಕಾನೂನು ತೊಡಕುಗಳು ಯಾವುದಿದೆ ಅವುಗಳನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು 30 ಲಕ್ಷ ರೂಪಾಯಿ ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಅವರಿಗೆ ಅಭಿನಂದಿಸಿ ಅದನ್ನು ಸ್ವಾಗತ ಮಾಡುತ್ತೇನೆ. ಈ 30 ಲಕ್ಷ ರೂಪಾಯಿಗೆ ಮತ್ತೆ 20 ಲಕ್ಷ ಸೇರಿಸಿ 50 ಲಕ್ಷ ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ದಕ್ಷಿಣ ಕನ್ನಡ ಜಿಲ್ಲೆಯವರಾಗಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ವಿಶೇಷವಾದಂತ ಒಂದು ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :– ಮಂಗಳೂರು ವಿಧಾನ ಸಭಾ ಕ್ಷೇತ್ರವಾಗಿದೆ. ಅಲ್ಲಿನ ತುಮ್ಮಿಯಲ್ಲಿರುವ ವೆಂಟೆಂಡ್ ಡ್ಯಾಂಗೆ ತಾವು ಹೆಚ್ಚಿನ ಒಂದು ಒತ್ತನ್ನು ಕೊಟ್ಟರೆ ಆ ಜಿಲ್ಲೆಯಲ್ಲಿರುವ ಮಂಗಳೂರು ಮತ್ತು ಮಹಾನಗರ ಪಾಲಿಕೆಯ ಸಮಸ್ಯೆ ಖಂಡಿತ ಬಗೆಯರಿಸುವುದಕ್ಕೆ ಸಾಧ್ಯವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಯು.ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರ ಹೆಸರಿಗೆ ಮಾತ್ರ ಮಂಗಳೂರು ಎಂದು ಇದೆ. ಆದರೆ, ಕ್ಷೇತ್ರದ ಹೆಚ್ಚಿನ ಭಾಗ ಗ್ರಾಮೀಣ ಪ್ರದೇಶದಲ್ಲಿದೆ.

2. **ವಿಷಯ :– ರಾಜ್ಯ ಸರ್ಕಾರದ ತೊಗರಿ ಬೆಳೆಗಾರರ ಅನುಕೂಲಕ್ಕಾಗಿ ರೂ. 12.00 ಕೋಟಿ ಬಿಡುಗಡೆ ಮಾಡಿ ತೊಗರಿ ಬೇಳೆ ಖರೀದಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಕೇಂದ್ರಗಳು ರೂ. 12.00 ಕೋಟಿ ಖರ್ಚಾದ ನಂತರ ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತವೆ. ಈ ಕ್ರಮದಿಂದ ತೊಗರಿ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದು, ಸರ್ಕಾರ ಬೆಂಬಲ ಬೆಲೆ ನೀಡಿ ಈ ಕೇಂದ್ರಗಳನ್ನು ಪುನರ್‌ಸ್ಥಾಪಿಸಿ ರೈತರ ಹಿತರಕ್ಷಣೆ ಕಾಪಾಡುವುದರ ಬಗ್ಗೆ.**

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ತೊಗರಿ ಬೆಳೆಗಾರರ ಅನುಕೂಲಕ್ಕಾಗಿ ರೂ. 12.00 ಕೋಟಿ ಬಿಡುಗಡೆ ಮಾಡಿ ತೊಗರಿ ಬೇಳೆ ಖರೀದಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ